1	2
ಮಂಡ್ಯ	115
ಹಾಸನ	162
ಚಿಕ್ಕಮಗಳೂರು	143
ಬೆಳಗಾವಿ	174
ಬಿಜಾಪುರ	7304
ಬಾಗಲಕೋಟೆ	1238
ಗುಲ್ಬರ್ಗಾ	339
ರಾಯಚೂರು	325
ಕೊಪ್ಪಳ	475
ಬಳ್ಳಾರಿ	716
ಬೀದರ್	149
ಶಿವಮೊಗ್ಗ, ಕೊಡಗು, ದ.ಕನ್ನಡ, ಉಡುಪಿ ಧಾರವಾಡ, ಹಾವೇರಿ, ಉತ್ತರ ಕನ್ನಡ	173
ಒಟ್ಟು	**13917**

ಅ) 7304 ಹೆಕ್ಟೇರ್

ಇ) ದಾಳಿಂಬೆ ಬೆಳೆಗೆ ರೋಗ ತಗುಲಿ ಹಾನಿಯಾಗಿರುವ ಪ್ರಮಾಣ ಶೇಕಡ 20 ರಿಂದ 25 ರಷ್ಟು ಎಂದು ಅಂದಾಜಿಸಲಾಗಿದೆ. ಹಾನಿಯಾದ ಮೊತ್ತದ ಅಂದಾಜು ದೊರೆತಿರುವುದಿಲ್ಲ.

ಈ) ಪರಿಹಾರ ನೀಡುವ ಅವಕಾಶ ತೋಟಗಾರಿಕೆ ಇಲಾಖೆಯ ಯಾವುದೇ ಯೋಜನೆಯಡಿಯಲ್ಲಿ ಇರುವುದಿಲ್ಲ.

ಉ) ಹೌದು

ಊ) ದಾಳಿಂಬೆ ಬೆಳೆ ಸಂಶೋಧನಾ ಕೇಂದ್ರವನ್ನು ಬಿಜಾಪುರ ಜಿಲ್ಲೆಯ ತಿಡಗುಂದಿಯಲ್ಲಿ ಈ ವರ್ಷದಿಂದ ಪ್ರಾರಂಭಿಸಲಾಗಿದೆ.

ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿ ಕಾರ್ಯಗಳು

1688 (1785) ಶ್ರೀ ಪಾಟೀಲ್ ಸಿದ್ದಲಿಂಗನಗೌಡ ಸಿದ್ದನಗೌಡ (ಮುಂಡರಗಿ) - ಮಾನ್ಯ ಕೃಷಿ ಉತ್ಪನ್ನ ಸಂಸ್ಕರಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ಉತ್ತರಿಸುವರೆ?

ಅ) ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯ ಕಾರ್ಯಗಳು ಕುಂಠಿತವಾಗಿ ಒದಗಿಸಿರುವ ಅನುದಾನ ಖರ್ಚಾಗದೆ ವಿಳಂಬವಾಗುತ್ತಿರುವುದು ಗಮನಕ್ಕೆ ಬಂದಿದೆಯೇ ; ಈ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಾಗುವುದು ;

ಆ) ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿಗೆ ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆಯಾದ ಅನುದಾನವೆಷ್ಟು ; ಇದರಲ್ಲಿ ಖರ್ಚಾಗದೇ ಉಳಿದ ಹಣವೆಷ್ಟು ; (ವಿವರ ನೀಡುವುದು);

ಇ) ಆಯವ್ಯಯದಲ್ಲಿ ಒದಗಿಸಿರುವ ಹಣವೆಷ್ಟು ; (ಕ್ಷೇತ್ರವಾರು ವಿವರ ನೀಡುವುದು) ?

ಶ್ರೀ ಜಿ. ರಾಜು ಗೌಡ (ಕೃಷಿ ಉತ್ಪನ್ನ ಸಂಸ್ಕರಣ ರಾಜ್ಯ ಸಚಿವರು):

ಅ) ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯ ಕಾರ್ಯಗಳು ಪ್ರಗತಿಯಲ್ಲಿದ್ದು, ಅನುಷ್ಠಾನಾಧಿಕಾರಿಗಳಿಗೆ ಕಾಮಗಾರಿಗಳ ಪ್ರಗತಿಗೆ ಅನುಗುಣವಾಗಿ ಹಣ

ಬಿಡುಗಡೆಮಾಡಲಾಗುತ್ತಿದೆ. ಮಂಡಳಿಯ ಕಾರ್ಯಗಳು ಪೂರ್ಣಗೊಳಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.

ಅ) ವಿವರಗಳನ್ನು ಅನುಬಂಧ 1 ರಲ್ಲಿ ನೀಡಲಾಗಿದೆ.

ಇ) ವಿವರಗಳನ್ನು ಅನುಬಂಧ 2ರಲ್ಲಿ ನೀಡಲಾಗಿದೆ.

ಅನುಬಂಧ 1

ಈ ಮಂಡಳಿಗೆ ಕಳೆದ 3 ವರ್ಷಗಳಲ್ಲಿ ಬಿಡುಗಡೆಯಾದ, ಖರ್ಚಾಗದೆ ಉಳಿದ ಹಣದ ವಿವರ ಈ ಕೆಳಗಿನಂತಿರುತ್ತದೆ.

ರೂ. ಲಕ್ಷಗಳಲ್ಲಿ

ಕ್ರ. ಸಂ.	ವರ್ಷ	ಪ್ರಾರಂಭಿಕ ಶಿಲ್ಕು	ಸರ್ಕಾರದಿಂದ ಬಿಡುಗಡೆಯಾದ ಹಣ	ಒಟ್ಟು	ಮಂಡಳಿಯಿಂದ ಖರ್ಚು ಮಾಡಿದ ಮೊತ್ತ	ಉಳಿಕೆ ಹಣ
1.	1999-2000	449.10	499.50	948.60	497.66	450.94
2.	2000-2001	450.94	660.00	1110.94	518.25	592.69
3.	2001-2002	592.69	230.00	822.69	421.96	400.73
4.	2002-2003	400.73	200.00	600.73	502.70	97.83

ಫೆಬ್ರವರಿ 2003ರ ಅಂತ್ಯಕ್ಕೆ ಈ ಮಂಡಳಿಯಲ್ಲಿ ರೂ. 97.83 ಲಕ್ಷ ಮಾತ್ರ ಉಳಿದಿರುತ್ತದೆ.

ಅನುಬಂಧ 2

ಆಯವ್ಯಯದಲ್ಲಿ ಒದಗಿಸಿರುವ ಹಣದ ವಿವರ ಈ ಕೆಳಗಿನಂತಿರುತ್ತದೆ. ಸರ್ಕಾರದಿಂದ ಬಿಡುಗಡೆಯಾದ ಹಣದಲ್ಲಿ ಆಡಳಿತಾತ್ಮಕ ವೆಚ್ಚ, ಶೇ. 5 ರಂತೆ ಸರ್ಕಾರದ ವಿವೇಚನಾ ನಿಧಿ ಹಾಗೂ ಶೇ. 5ರಂತೆ ಅಧ್ಯಕ್ಷರ ವಿವೇಚನಾ ನಿಧಿ ಕಡಿತಗೊಳಿಸಿ ಉಳಿದ ಹಣವನ್ನು ಪ್ರತಿ ಕ್ಷೇತ್ರಕ್ಕೆ ಹಂಚಿಕೆ ಮಾಡಲಾಗುತ್ತಿದೆ.

(ರೂ.ಲಕ್ಷಗಳಲ್ಲಿ)

ಕ್ರ. ಸಂ.	ವರ್ಷ	ಆಯವ್ಯಯದಲ್ಲಿ ಒದಗಿಸಿದ ಹಣ	ಸರ್ಕಾರದಿಂದ ಬಿಡುಗಡೆಯಾದ ಹಣ	ಪ್ರತಿ ಕ್ಷೇತ್ರಕ್ಕೆ ನಿಗದಿಪಡಿಸಿದ ಹಣ
1.	1999-2000	1550.00	499.50	5.00
2.	2000-2001	900.00	660.00	6.80
3.	2001-2002	380.00	230.00	2.52
	2002-2003	420.00	200.00	(ಈವರೆಗೆ ಬಿಡುಗಡೆಯಾಗಿರುವ ಹಣ)